| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 123/2019

ಫ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ಮಲ್ಲಿಕಾರ್ಜುನ. |
| ತಂದೆಯ ಹೆಸರು | : | ಶರಣಪ್ಪ ಪೂಜಾರಿ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ತೋಟದ ಮಾನ್ಯ ದೇವಾಲಯದ ಅರ್ಚಕರು |
| ವಾಸ | : | ಕೆಂಭಾವಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 20-09-2024
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಕೆಂಭಾವಿ ಗ್ರಾಮದಲ್ಲಿ ಬರುವ ಸರ್ವೆ ನಂ. 602/2 ವಿಸ್ತೀರ್ಣ 4 ಎಕರೆ 18 ಗುಂಟೆ ಜಮೀನು ನಮ್ಮ ಹಿರಿಯ ಹೆಸರಿನಲ್ಲಿ ಇರುತ್ತದೆ. ಆ ಜಮೀನನ್ನು ಹಿರಿಯರು ಮತ್ತು ನಾವು ರಾಜಿ ಡಿಕ್ರಿ ಮಾಡಿಕೊಳ್ಳುವ ಸಲುವಾಗಿ ಸುರಪೂರ ಸಿವಿಲ್ ನ್ಯಾಯಾಲಯದಲ್ಲಿ ದಿಃ 22.01.2016 ರಂದು ರಾಜಿ ಡಿಕ್ರಿ ಮಾಡಿಕೊಂಡಿದ್ದು ಇರುತ್ತದೆ. ಅದಾದ ನಂತರ ಡಿಕ್ರಿ ಕಾಫಿ ತೆಗೆದುಕೊಂಡು ಸುರಪೂರ ತಹಶೀಲ್ದಾರ ಕಛೇರಿಗೆ ಹೋಗಿ ಮುಟೇಶನಗಾಗಿ ದಾಖಲೆಗಳನ್ನು ಹಚ್ಚಿ ಕಂಪ್ಯೂಟರ ಆಪರ್ಟರ ಅವರಿಗೆ ಅರ್ಜಿಯನ್ನು ಕೊಟ್ಟಿರುತ್ತೇನೆ. ಸದರಿ ಫೈಲ್ 8-9 ದಿನಗಳ ನಂತರ ಆರ್.ಐ. ಬಳಿ ಅರ್ಜಿ ಹೊಯಿತು. ಆರ್.ಐ ಅವರು ನನಗೆ ಫೋನ್ ಮಾಡಿ ಹಿರಿಯರನ್ನು ಕರೆದುಕೊಂಡು ಬರಲು ಹೇಳಿದರು. ನಾನು ಹಿರಿಯರನ್ನು ಕರೆದುಕೊಂಡು ಹೋಗಿದೆ. ನಮ್ಮ ತಾಯಿ, ಅಜ್ಜಿ ಮತ್ತು ಅಜ್ಜ ಅವರನ್ನು ಕರೆದುಕೊಂಡು ಯು.ಕೆ.ಪಿ. ಕ್ಯಾಂಪನಲ್ಲಿರುವ ಕಂದಾಯ ಇಲಾಖೆಗೆ ಕಛೇರಿಗೆ ಕರೆದುಕೊಂಡು ಹೋಗಿ ಆರ್. ಐ ಅವರಿಗೆ ಬೇಟಿ ಮಾಡಿಸಿದೆ ಅವರು ನಮ್ಮ ಹಿರಿಯರನ್ನು ವಿಚಾರಣೆ ಮಾಡಿ ಅವರ ಸಹಿಗಳನ್ನು ಪಡೆದುಕೊಂಡರು. ನಾನು ಈ ಪೈಲನ್ನು ವಿ.ಎ. ಅವರಿಗೆ ಕಳುಹಿಸಿಕೊಡುತ್ತೇನೆ ಎಂದು ಹೇಳಿ ಕಳುಹಿಸಿದರು. 3-4 ದಿನಗಳ ನಂತರ ವಾಲಿಕಾರ ಹಣಮಂತ್ರಾಯ ತಳವಾರ ನನ್ನ ಬಳಿ ಬಂದು ನಿಮ್ಮ ಪೈಲ ನಮ್ಮ ತಲಾಟಿ ಅವರ ಬಳಿ ಬಂದಿದೆ ಅದಕ್ಕೆ ಬೇಟಿಯಾಗಲು ಕಳುಹಿಸಿದ್ದಾರೆ ಎಂದು

ಹೇಳಿದೆ. ನಾನು ತಲಾಟಿಯವರಿಗೆ ಫೋನ್ ಮಾಡಿದೆ. ನಮ್ಮ ಪೈಲನ್ನು ಬೇಗ ಮಾಡಿ ಕಳುಹಿಸಿ ಎಂದು ಹೇಳಿದೆ. ನಾನು ವಾಲಿಕಾರಗೆ ಹೇಳಿ ಕಳುಹಿಸಿದ್ದೇನೆ ವಿಚಾರ ಮಾಡು ಎಂದು ಹೇಳಿದರು. ಆಗ ನಾನು ವಾಲಿಕಾರ ಹಣಮಂತ್ರಾಯ ಅವರಿಗೆ ಕೇಳಿದೆ. ತಲಾಟಿಯವರು ನಿಮ್ಮ ಕೆಲಸಕ್ಕಾಗಿ 12,000/- ರೂ ಕೊಡಬೇಕು ಎಂದು ಹೇಳಿದ್ದಾರೆ ಎಂದು ನನಗೆ ಹೇಳಿದ. ನಾನು ಮಾರನೇ ದಿನ ತಲಾಟಿಯವರನ್ನು ಬೇಟಿಯಾದೆ. ನನ್ನ ಪೈಲನ್ನು ಬೇಗ ಕಳುಹಿಸಿ ಎಂದು ಕೇಳಿದೆ. 12,000/- ರೂ ಕೊಟ್ಟರೆ ನಾನು ಕಳುಹಿಸುತ್ತೇನೆ ಎಂದು ಹೇಳಿದರೆ. 12,000/- ರೂ ಲಂಚ ಕೊಟ್ಟರೆ ಮಾತ್ರ ಕಳುಹಿಸುತ್ತೇನೆ ಎಂದು ಹೇಳಿದರು. ನಂತರ ನಾನು ಆಯಿತು ಎಂದು ಮನೆಗೆ ಬಂದೆ. ದಿಃ 24-05-2018 ರಂದು ಬೆಳಿಗ್ಗೆ 11-22 ಗಂಟೆಗೆ ನನ್ನ ಫೋನ್ ನಂ. 7676388800 ನಿಂದ ತಲಾಟಿಯವರಿಗೆ ನಾನು ಫೋನ್ ಮಾಡಿದೆ ಅವರ ನಂಬರ 7899950103 ಇರುತ್ತದೆ. ಅವರು ಫೋನ್ ಮಾಡಿದಾಗ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ. ನಾನು ಕೆಂಭಾವಿ ಗ್ರಾಮದ ಟೈಪ ಮಾಡುವವರ ಅಂಗಡಿಗೆ ಹೋದೆನು. ಲಂಚದ ಬೇಡಿಕೆಯ ಬಗ್ಗೆ ಈ ಎಲ್ಲ ಮಾಹಿತಿಯನ್ನು ಟೈಪ ಮಾಡಿಸಿದೆ ದಿಃ 25-05-2018 ರಂದು ಬೆಳಿಗ್ಗೆ 8-30 ಗಂಟೆಗೆ ಎ.ಸಿ.ಬಿ. ಕಛೇರಿಗೆ ಬಂದೆನು. ಅಲ್ಲಿ ವಿರೇಶ ಡಿವೈಎಸಪಿ ಅವರಿಗೆ ಬೇಟಿಯಾದೆ. ನಾನು ಟೈಪ ಮಾಡಿಸಿದ ಅರ್ಜಿಯನ್ನು ಅವರಿಗೆ ಕೊಟ್ಟು ಕ್ರಮಕೈಕೊಳ್ಳುವಂತೆ ಕೇಳಿದೆ. ಅವರು ಆ ಅರ್ಜಿಯನ್ನು ಓದಿ ನನ್ನ ವಿಚಾರಣೆ ಮಾಡಿ ಕೇಸನ್ನು ದಾಖಲಿಸಿಕೊಳ್ಳಲು ನನ್ನ ಸಹಿ ಪಡೆದರು. ಸದರಿ ದೂರನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಕೇಸ ದಾಖಲಿಸಿಕೊಂಡ ನಂತರ ವಿರೇಶ ಅವರು ಸತ್ಯನಾರಾಯಣ ಪಿಐ ಅವರ ಹತ್ತಿರ ಆ ಅರ್ಜಿಯ ನಕಲನ್ನು ನೀಡಿದರು. ಆ ಅರ್ಜಿಯನ್ನು ಓದಿಕೊಂಡು ಯಶ್ವಂತ ಬಿಸನಳ್ಳಿ ತನಿಖಾದಿಯವರನ್ನು ಕರೆದು ಇಬ್ಬರು ಪಂಚರನ್ನು ಕರೆಯಿಸುವಂತೆ ಅರ್ಜಿಯನ್ನು ಕೊಟ್ಟು ಕಳುಹಿಸಿದರು. ಅವರು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಹೋಗಿ ಇಬ್ಬರು ಪಂಚರಾದ ಲಕ್ಷ್ಮಣ ದಾರಸ ಮತ್ತು ಹಣಮಂತ ಬಿ. ಅವರು ಒಬ್ಬರು ಎಫ್.ಡಿ.ಎ. ಮತ್ತು ಎಸ್.ಡಿ.ಎ. ಆಗಿದ್ದರು. ಸದರಿ ಪಂಚರನ್ನು ಪಿಐ ಬಳಿ ಬೆಳಿಗ್ಗೆ 10-00 ಗಂಟೆಗೆ ಕರೆದುಕೊಂಡು ಬಂದರು. ಪಿಐ ರವರು ನಮ್ಮಗಳನ್ನು ಪರಸ್ಪರ ಪರಿಚಯ ಮಾಡಿಸಿದರು. ಅವರುಗಳಿಗೆ ನಾನು ಕೊಟ್ಟ ದೂರನ್ನು ಓದಲು ಕೊಟ್ಟರು. ಅವರು ಸದರಿ ದೂರನ್ನು ಓದಿಕೊಟ್ಟರು. ಪಿಐ ಅವರು ಅವರಿಗೆ ಮಾಹಿತಿ ಕೊಡುವಂತೆ ನನಗೆ ಹೇಳಿದರು. ನಾನು ಎಲ್ಲ ವಿವರವನ್ನು ಹೇಳಿದೆ. ನನ್ನ ಮೊಬೈಲನಲ್ಲಿ ದಾಖಲಾಗಿದ್ದ ಧ್ವನಿಸೂರಳು ಕೇಳಿಸಿದೆ. ಅವರಿಬ್ಬರು ಪಂಚರಾಗಲು ಒಪ್ಪಿದರು. ನಾನು ಹಣ ತಂದಿದ್ದ ಬಗ್ಗೆ ನನ್ನನ್ನು ಕೇಳಿದರು. ನಾನು ತಂದಿದ್ದ 12,000/- ಅಂದರೆ 2,000/- ಮುಖ ಬೆಲೆಯ 6 ನೋಟುಗಳನ್ನು ಪಿಎಸಐ ಅವರ ಕೈಯಲ್ಲಿ ಕೊಟ್ಟೆನು. ಅವರು ಆ ನೋಟುಗಳನ್ನು ಪಂಚ ಲಕ್ಷ್ಮಣ ಕೈಯಲ್ಲಿ ಕೊಟ್ಟರು. ಲಕ್ಷ್ಮಣ ಅವರು ಆ ನೋಟುಗಳನ್ನು ಎಣಿಸಿ ನೋಟಿನ

ನಂಬರಗಳನ್ನು ಓದಿ ಮತ್ತೊಬ್ಬ ಸಾಕ್ಷಿ ಹಣಮಂತನಿಗೆ ಹೇಳಿದರು. ಹಣಮಂತ ಲ್ಯಾಪಟಾಪನಲ್ಲಿ ನೋಟುಗಳ ನಂಬರ ಹೇಳಿ ಬರೆಯಿಸಿದರು. ಆ ರೀತಿ ಬರೆದ ದಾಖಲೆಯನ್ನು ನಿ.ಪಿ.3 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಧ್ವನಿಯನ್ನು ಲ್ಯಾಪಟಾಪನಲ್ಲಿ ಗುತ್ತಪ್ಪಗೌಡ ಪೊಲೀಸ  ಅವರು ವಿಜಯಕುಮಾರ ಅವರಿಗೆ ಹೇಳಿ ಟೈಪ ಮಾಡಿಸಿದರು. ನನ್ನ ಧ್ವನಿಗೆ ಫಿರ್ಯಾದಿ ಯೆಂದು ತಲಾಟಿಯವರ ಧ್ವನಿಯನ್ನು ಆರೋಪಿ ಎಂದು ಬರೆದರು. ಸದರಿ ದಾಖಲೆಯನ್ನು ನಿ.ಪಿ.4 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆ ತಲಾಟಿ ಎಂದು ಗುರುತಿಸುತ್ತಾರೆ.

2. ಪಿಐ ರವರು 2 ಡಬ್ಬಿಗಳನ್ನು ತೆಗೆದುಕೊಂಡು ನಮಗೆ ತೋರಿಸಿದರು. ಒಂದು ಡಬ್ಬಿಯಲ್ಲಿ ಪಿನ್ತಾಪಲಿನ ಪೌಡರ, ಇನ್ನೊಂದು ಡಬ್ಬಿಯಲ್ಲಿ ಸೋಡಿಯಂ ಕಾರ್ಬೋಟ ಪೌಡರ ಎಂದು ತೋರಿಸಿದರು. ಒಂದು ಶುದ್ಧ ನೀರಿನ ಬಾಟಲಿ ತೋರಿಸಿ, ಶುದ್ಧ ನೀರಿನ ಬಾಟಲ ಸ್ಯಾಮಪಲ್ ತೆಗೆದು ಸೀಲ್ ಮಾಡಿದರು ಅದನ್ನು ಆರ್ಟಿಕಲ್-1 ಎಂದು ನಮೂದು ಮಾಡಿ ಪಂಚರು ಮತ್ತು ಪಿಐ ಸಹಿ ಮಾಡಿದ ಚೀಟಿ ಅಂಟಿಸಿದರು. ಸದರಿ ಆರ್ಟಿಕಲ್-1 ಎಂದು ಗುರುತಿಸಲಾಯಿತು. ಪಿನಾಪ್ತಲಿನ ಪೌಡರ ಡಬ್ಬಿ ತೆಗೆದುಕೊಂಡು ಮಾಹಿತಿ ನೀಡಿದರು. ಸದರಿ ಪಿನಾಪ್ತಲಿನ ಪೌಡರ ಯಾವುದೇ ನೋಟು ಅಥವಾ ವಸ್ತುವಿಗೆ ಹಚ್ಚಿದಾಗ ಸೋಡಿಯಂ ಕಾರ್ಬೋನೇಟ ದ್ರಾವಣದಲ್ಲಿ ಅದ್ದಿದರೆ ಅದು ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಎಂದು ಮಾಹಿತಿ ಕೊಟ್ಟರು. ಮತ್ತೊಂದು ಡಬ್ಬಿಯಲ್ಲಿ ಸೋಡಿಯಂ ಕಾರ್ಬೋಟ ದ್ರಾವಣ ತೋರಿಸಿ ಅದನ್ನು ಶುದ್ಧ ನೀರಿನಲ್ಲಿ ದ್ರಾವಣ ತಯಾರಿಸಿ ಪಿನ್ತಾಪಲಿನ ಪೌಡರ ಹಚ್ಚಿರುವ ವಸ್ತು ಅದ್ದಿದರೆ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಎಂದು ಹೇಳಿದರು. ಎರಡು ಬಿಳಿ ಪೇಪರನಲ್ಲಿ ಸದರಿ ಪೌಡರನ್ನು ಬೇರೆ ಬೇರೆಯಾಗಿ ಸೀಲ್ ಮಾಡಿದರು ಸದರಿ ಪೌಡರಗಳನ್ನು ಆರ್ಟಿಕಲ್-2 ಮತ್ತು 3 ಇದ್ದು ಅವುಗಳನ್ನು ಮು.ಮಾ.2 ಮತ್ತು 3 ಎಂದು ಗುರುತಿಸಲಾಯಿತು. (ಸದರಿ ಪಾಟೀಕಟಗಳು ಸೀಲ್ ಇದ್ದು ಅವುಗಳನ್ನು ತೆರೆದ ನ್ಯಾಯಾಲಯದಲ್ಲಿ ಓಪನ ಮಾಡಲಾಯಿತು) ಆ ನೋಟುಗಳನ್ನು ಪ್ರಕಾಶ ಮಾಳಿ ಪೋಲಿಸ ಕೈಯಲ್ಲಿ ಪಿನಾಪ್ತಲಿನ ಪೌಡರ ಹಚ್ಚುವಂತೆ ಕೊಟ್ಟಿದ್ದು ಅವರು ಟೇಬಲ ಮೇಲೆ ಆ ನೋಟುಗಳನ್ನು ಹಾಕಿ ಪ್ರಕಾಶ ಪಾಳಿ ಆ ನೋಟುಗಳಿಗೆ ಎರಡೂ ಬದಿಗೆ ಪಿನಾಪ್ತಲಿನ ಪೌಡರ ಲೇಪಿಸಿದರು. ಆ ನೋಟುಗಳನ್ನು ಪಂಚ ಹಣಮಂತ ಅವರಿಗೆ ನನ್ನ ಶರ್ಟನ ಎಡಗಡೆಯ ಕೀಸೆಯನ್ನು ಶೋದಿಸಿ ಏನು ಇಲ್ಲ ಎಂದು ಖಾತರಿಸಿ ಸದರಿ ನೋಟುಗಳನ್ನು ಪ್ರಕಾಶ ಮಾಳಿ ಅವರು ಸಾಕ್ಷಿ ಹಣಮಂತ  ಕೈಯಲ್ಲಿ ಕೊಟ್ಟರು. ಸಾಕ್ಷಿ ಹಣಮಂತ ಸದರಿ ನೋಟುಗಳನ್ನು ನನ್ನ ಶರ್ಟನ ಎಡಗಡೆ ಜೇಬಿನಲ್ಲಿ ಇಟ್ಟರು. ಸೋಡಿಯಂ ಕಾರ್ಬೋನೇಟ ದ್ರಾವಣವನ್ನು ಒಂದು ಬಟ್ಟಲಿನಲ್ಲಿ ಗುತ್ತಪ್ಪಗೌಡ ಪೇದೆ ತಯಾರಿಸಿದರು. ಸದರಿ ದ್ರಾವಣದಲ್ಲಿ ಹಣಮಂತ ಪಂಚರ ಕೈ

ಬೆರಳುಗಳನ್ನು ತೊಳೆದರು. ಕೈಗಳನ್ನು ತೊಳೆಯುವ ಮೊದಲು ಧ್ರಾವಣವನ್ನು ಸ್ಯಾಂಪಲಆಗಿ ತೆಗೆದರು ಅದು ಆರ್ಟಿಕಲ್-4 ಆಗಿರುತ್ತದೆ ಅದನ್ನು ಮು,ಮಾ. 4 ಎಂದು ಗುರುತಿಸಲಾಯಿತು. ಉಳಿದ ಧ್ರಾವಣದಲ್ಲಿ ಹಣಮಂತ ಪಂಚರ ಕೈ ಬೆರಳುಗಳನ್ನು ತೋಳಿಸಿದರು ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು ಅದನ್ನು ಒಂದು ಬಾಟಲಿಯಲ್ಲಿ ಹಾಕಿ ಹೆಚ್.ಕೆ. ಎಂದು ಸೀಲ್ ಮಾಡಿದ್ದು ಅದು ಆರ್ಟಿಕಲ್-5 ಆಗಿದ್ದು ಅದನ್ನು ಮು.ಮಾ.5 ಎಂದು ಗುರುತಿಸಲಾಯಿತು. ಆ ನೋಟುಗಳನ್ನು ಯಾವ ರೀತಿ ಆರೋಪಿಗೆ ಕೊಡಬೇಕು ಎಂದು ಪಿಐ ರವರು ನನಗೆ ಮಾಹಿತಿ ಕೊಟ್ಟರು. ಆರೋಪಿ ಲಂಚದ ಹಣವನ್ನು ಯಾರ ಕೈಯಲ್ಲಿ ಆದರೆ ಕೊಡ ಎಂದರೆ ಕೊಡಬೇಕು. ಟೇಬಲ್ ಮೇಲೆ ಇಡು ಎಂದರೆ ಇಡಬೇಕು. ಯಾವ ಪುಸ್ತಕದಲ್ಲಿ ಇಡು ಎಂದರೆ ಇಡಬೇಕು. ಆದರೆ ಆತ ಕೇಳಿದರೆ ಕೈಯಲ್ಲಿ ಕೊಡಬೇಕು ಎಂದು ಹೇಳಿದರು. ಲಂಚವನ್ನು ಕೊಟ್ಟ ನಂತರ ನನ್ನ ಬಲಗೈಯಿಂದ ಕೆನ್ನೆ ಸವರಿಕೊಂಡು ಸನ್ನೆ ಮಾಡಬೇಕು ಎಂದು ಹೇಳಿದರು. ಎಲ್ಲ ಅಧಿಕಾರಿಗಳು ಕೈ ಗಳನ್ನು ತೊಳೆದುಕೊಂಡರು, ಆಗ ಹಣ ಪಡೆದುಕೊಂಡರೆ ಮೊಬೈಲನಲ್ಲಿ ಧ್ವನಿ ದಾಖಲಿಸಿ ಕೊಳ್ಳುವಂತೆ ಹೇಳಿದರು. ನೆರಳು ಸಾಕ್ಷಿ ಲಕ್ಷ್ಮಣನಿಗೆ ಆರೋಪಿಗೆ ಹಣ ಕೊಟ್ಟ ತಕ್ಷಣ ಸನ್ನೆ ಮಾಡಬೇಕು ಎಂದು ಹೇಳಿದ. ಆ ಎಲ್ಲ ವಸ್ತುಗಳನ್ನು ತೆಗೆದು ಅಲಮಾರದಲ್ಲಿ ಇಟ್ಟು. ಉಳಿದ ವಸ್ತುಗಳನ್ನು ತಮ್ಮ ಬ್ಯಾಗನಲ್ಲಿ ಪ್ಯಾಕ ಮಾಡಿಕೊಂಡರು. ಈ ಎಲ್ಲ ಪ್ರಕ್ರಿಯೆಗಳನ್ನು ಬಿಸನಳ್ಳಿಯವರು ಫೋಟೊಗಳನ್ನು ತೆಗೆದರು. ವಿಜಯಕುಮಾರ ಅವರು ಈ ಎಲ್ಲ ಪ್ರಕ್ರಿಯೇ ಬಗ್ಗೆ ಟೈಪ ಮಾಡಿದರು. ಸದರಿ ಪಂಚನಾಮೆಯನ್ನು ನಿ.ಪಿ.5 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. 24 ಫೋಟೊಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ.ಪಿ.6 ರಿಂದ 29 ಎಂದು ಗುರುತಿಸಲಾಯಿತು. ದಿಃ 25-05-2018 ರಂದು ಈ ಎಲ್ಲ ಪ್ರಕ್ರಿಯೇ ಬೆಳಿಗ್ಗೆ 10-30 ರಿಂದ 12-00 ಗಂಟೆಯವರೆಗೆ ಎ.ಸಿ.ಬಿ. ಕಛೇರಿಯಲ್ಲಿ ಹಣ ವಹಿಸಿಕೊಡುವ ಪಂಚನಾಮೆ ನಡೆಯಿತು. ನಾನು ಹಾಜರಪಡಿಸಿದ 2000/- ಮುಖ ಬೆಲೆಯ 6 ನೋಟುಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾರೆಯಾಗಿ ಮು.ಮಾ.6 ಎಂದು ಹಾಗೂ ಹಣ ಇಟ್ಟಿರುವ ಕವರನ್ನು ನಿ.ಪಿ.30 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯಚಾರಣೆಕಾಗಿ ಸಮಯವಕಾಶ ಕೋರಿದ್ದು ಅನುಮತಿ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.